ಇ) ಇಂತಹ ಶರಾಬು ಅಂಗಡಿಗಳನ್ನು ನಿಲ್ಲಿಸಲು ಸರ್ಕಾರವು ತೆಗೆದುಕೊಳ್ಳುವ ಕ್ರಮವೇನು?

ಶ್ರೀ ಜಯವಂತ ಸುಬ್ರಾಯ (ಅಬಕಾರಿ ರಾಜ್ಯ ಸಚಿವರು) :

ಅ) 530 ಅಂಗಡಿಗಳು.

ಆ) ಹೌದು

ಇ) 12 ಪ್ರಕರಣಗಳಲ್ಲಿ ದೂರುಗಳು ಬಂದಿದೆ. ಈ ಎಲ್ಲಾ 12 ಅನಧಿಕೃತ ಶರಾಬು ಅಂಗಡಿಗಳನ್ನು ಮುಚ್ಚಿಸಲಾಗಿದೆ.

ರಾಜ್ಯದಲ್ಲಿ ವಿದ್ಯುತ್ ಅವ್ಯವಸ್ಥೆ ಸರಿಪಡಿಸುವುದು.

700 (456) ಶ್ರೀ ಎ.ರುಕ್ಕಯ್ಯ ಪೂಜಾರಿ (ವಿಟ್ಲ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ 1998-99ನೇ ಸಾಲಿನಲ್ಲಿ ಅಕ್ರಮ ಸಕ್ರಮದಲ್ಲಿ ಎಷ್ಟು ಪಂಪುಸೆಟ್‌ಗಳಿಗೆ ವಿದ್ಯುತ್ ಒದಗಿಸಲಾಗಿದೆ.

ಆ) ಇದರಿಂದ ವಿದ್ಯುತ್ ಅವ್ಯವಸ್ಥೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದರೆ, ಸರಿಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ 1998-99ನೇ ಸಾಲಿನಲ್ಲಿ ಫೆಬ್ರವರಿ 99ರ ಅಂತ್ಯದವರೆಗೆ ಒಟ್ಟು 14489 ಅನಧಿಕೃತ ನೀರಾವರಿ ಪಂಪುಸೆಟ್ಟುಗಳನ್ನು ಸಕ್ರಮಗೊಳಿಸಲಾಗಿದೆ.

ಆ) ಹೌದು, ಬಂದಿದೆ ಇದನ್ನು ಸರಿಪಡಿಸಲು ವಿದ್ಯುತ್‌ಮಾರ್ಗಗಳ ಬಲವರ್ಧನೆ, ಹೆಚ್ಚುವರಿ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸುವುದು ಇತ್ಯಾದಿ ಕ್ರಮಗಳನ್ನು ತೆಗೆದುಕೊಂಡಿರುತ್ತದೆ.

ಬೆಂಗಳೂರು ನಗರದಲ್ಲಿ ಬೋರ್‌ವೆಲ್‌ಗಳನ್ನು ಕೊರೆದಿರುವುದು.

703 (1090) ಶ್ರೀ.ಎಸ್.ರಾಜಣ್ಣ(ಭಾರತೀನಗರ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. ಬೆಂಗಳೂರು ನಗರದಲ್ಲಿ 1996ರ ಜನವರಿಯಿಂದ ಫೆಬ್ರವರಿ 1999ರ ವರೆಗೆ ಕೊರೆದಿರುವ ಬೋರ್‌ವೆಲ್‌ಗಳ ಸಂಖ್ಯೆ ಎಷ್ಟು? (ವಿಧಾನ ಸಭಾ ಕ್ಷೇತ್ರವಾರು)

2. ಈ ಬಗ್ಗೆ ಸರ್ಕಾರ ಖರ್ಚು ಮಾಡಿದ ಹಣವೆಷ್ಟು?

3. ಈ ಪೈಕಿ ಕೆಟ್ಟಿರುವ ಕೊಳವೆ ಬಾವಿಗಳೆಷ್ಟು? ಅವುಗಳನ್ನು ರಿಪೇರಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು?

4. ಭಾರತಿ ನಗರ ವಿಧಾನ ಸಭಾ ಕ್ಷೇತ್ರದಲ್ಲಿ ಯಾವ ಯಾವ ಸ್ಥಳದಲ್ಲಿ ಕೊಳವೆ ಬಾವಿಗಳಿವೆ? ಅವುಗಳಲ್ಲಿ ಎಷ್ಟು ಕೆಲಸ ಮಾಡುತ್ತಿವೆ?

5. 1999-2000ನೇ ಸಾಲಿನಲ್ಲಿ ಭಾರತಿ ನಗರ ವಿಧಾನಸಭಾ ಕ್ಷೇತ್ರದಲ್ಲಿ ಕೊರೆಯಲು ಉದ್ದೇಶಿಸಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು?

ಶ್ರೀ ವಿ. ಸೋಮಣ್ಣ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

1. 927 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ವಿಧಾನ ಸಭಾ ಕ್ಷೇತ್ರವಾರು ವಿವರ :

1. ಉತ್ತರಹಳ್ಳಿ	258	9. ಬಿನ್ನಿಪೇಟೆ	264
2. ಯಲಹಂಕ	97	10. ಚಾಮರಾಜಪೇಟೆ	3
3. ವರ್ತೂರು	28	11. ಬಸವನಗುಡಿ	44
4. ಶಿವಾಜಿನಗರ	8	12. ಜಯನಗರ	28
5. ಮಲ್ಲೇಶ್ವರಂ	60	13. ಶಾಂತಿನಗರ	18
6. ರಾಜಾಜಿನಗರ	79	14. ಭಾರತೀನಗರ	20
7. ಗಾಂಧೀನಗರ	7	15. ಜಯಮಹಲ್	12
8. ಚಿಕ್ಕ ಪೇಟೆ	1		

2. ಈ ಬಗ್ಗೆ ಒಟ್ಟು 468.63 ಲಕ್ಷ ರೂ.ಗಳು ಖರ್ಚಾಗಿರುತ್ತದೆ.

3. ಈಗ ಕೆಟ್ಟಿರುವ ಕೊಳವೆ ಬಾವಿಗಳು ಯಾವುದುಇಲ್ಲ. ಕೊಳವೆ ಬಾವಿಗಳನ್ನು ಆಗಿಂದಾಗ್ಗೆ ರಿಪೇರಿ ಮಾಡಲು ನಾಲ್ಕು ಉಪ ವಿಭಾಗಗಳಿರುತ್ತದೆ. ಅವುಗಳಲ್ಲಿ ವಾಹನ, ಸಾಮಗ್ರಿ ಬಿಡಿ ಭಾಗಗಳ ಸಹಿತ ಮೂರು ರಿಪೇರಿ ಗುಂಪುಗಳಿವೆ. ಇದಲ್ಲದೆ 2000 ಕೊಳವೆ ಬಾವಿಗಳ ನಿರ್ವಹಣೆಯನ್ನು ರಾಜ್ಯ ಸರ್ಕಾರಿ ಸಂಸ್ಥೆಯಾದ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ರವರಿಗೆ ವಹಿಸಲಾಗಿದೆ. ಕೆಟ್ಟು ಹೋದ ಕೊಳವೆಬಾವಿಗಳನ್ನು ಕಾಲಕಾಲಕ್ಕೆ ಇಲಾಖಾ ವತಿಯಿಂದ ಸರಿಪಡಿಸಲಾಗುತ್ತಿದೆ.

4. ಭಾರತಿ ನಗರ ವಿಧಾನ ಸಭಾ ಕ್ಷೇತ್ರದಲ್ಲಿ 20 ಕೊಳವೆ ಬಾವಿಗಳನ್ನು ಕೊರಿದಿದ್ದು ಅವು ಸಮರ್ಪಕವಾಗಿ ಕೆಲಸ,ಮಾಡುತ್ತಿವೆ.

5. ಬೆಂಗಳೂರು ನಗರದಲ್ಲಿ ಎಲ್ಲಾ ವಿಧಾನ ಸಭಾ ಕ್ಷೇತ್ರಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯ ಸಹಾಯ ಪಡೆದು 10 ಕೊಳವೆ ಬಾವಿಗಳನ್ನು ಅವಶ್ಯಕತೆಗೆ ಅನುಗುಣವಾಗಿ ಕೊರೆಯಲು ಉದ್ದೇಶಿಸಲಾಗಿದೆ.

ಸಚಿವ ಸಂಪುಟದ ವಿದೇಶಿ ಪ್ರವಾಸ

706 (261) ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1998ನೇ ಜನವರಿಯಿಂದ ಡಿಸೆಂಬರ್ 1998ರವರೆಗೆ ರಾಜ್ಯ ಸಚಿವ ಸಂಪುಟದ ಸದಸ್ಯರು ಕೈಗೊಂಡ ವಿದೇಶ ಪ್ರವಾಸಗಳ ಪೂರ್ಣ ವಿವರ ನೀಡುವುದು.